5

# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಬೀದರ್ ಜಿಲ್ಲೆಯ, ಬೀದರ್ ತಾಲ್ಲೂಕಿನ, ಬಗದಲ್ ಗ್ರಾಮ ಪಂಚಾಯಿತಿಯ, 05 ಜನ ಚುನಾಯಿತ ಸದಸ್ಯರುಗಳು ಹಣಕಾಸಿನ ಅವ್ಯವಹಾರದಲ್ಲಿ ಭಾಗಿಯಾಗಿರುವುದರಿಂದ ಇವರುಗಳ ಸದಸ್ಯತ್ವವನ್ನು ತೆಗೆದುಹಾಕುವ ಕುರಿತು–ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್, ಇವರ ಪತ್ರ ಸಂಖ್ಯೆ:ಜಿಪಂಬಿ/ಗ್ರಾಪಂ/ಸಿಆರ್–14/2018–19/13277, ದಿನಾಂಕ:06.07.2018.
3. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ: ಕಂ/ಪ್ರಾಆಕ/ಜಿಪಂ/16/2019–20/1926, ದಿನಾಂಕ:05.08.2019.

**ಪ್ರಸ್ತಾವನೆ:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು 48(4) ಮತ್ತು 48(5) ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಮೇಲೆ ದಾಖಲಾಗುವ ದೂರುಗಳಿಗೆ ಸಂಬಂಧಿಸಿದಂತೆ ಅರೆನ್ಯಾಯಿಕ ಮಾದರಿಯಲ್ಲಿ ವಿಚಾರಣೆ ನಡೆಸುವ ಅಧಿಕಾರವನ್ನು ಸಂಬಂಧಿಸಿದ ಕಂದಾಯ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:02.02.2019 ರಲ್ಲಿ ವಹಿಸಿ, ಸರ್ಕಾರವು ಆದೇಶಿದೆ.

ಬೀದರ್ ಜಿಲ್ಲೆ, ಬೀದರ್ ತಾಲ್ಲೂಕು, ಬಗದಲ್ ಗ್ರಾಮ ಪಂಚಾಯಿತಿಯ 05 ಜನ ಚುನಾಯಿತ ಸದಸ್ಯರು 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಹಣ ದುರುಪಯೋಗ ಮಾಡಿದ್ದು ನಿಯಮ ಬಾಹಿರವಾಗಿ ಕರ್ತವ್ಯ ನಿರ್ವಹಿಸಿ ಅನೇಕ ಅವ್ಯವಹಾರಗಳನ್ನು ಮಾಡಿ ಸ್ವಜನಪಕ್ಷಪಾಯತಮಾಡಿ ಅಧಿಕಾರ ದುರ್ಬಳಕೆ ಮಾಡಿರುವುದರಿಂದ ಕ್ರಮ ಜರುಗಿಸಲು ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ಬೀದರ್ ಇವರು ಸರ್ಕಾರಕ್ಕೆ ಪ್ರಾಸ್ತಾವನೆ ಸಲ್ಲಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆಯ ದಿನಾಂಕ. 02.02.2019 ರನ್ವಯ ವಿಚಾರಣೆ ಮಾಡಲು ಪ್ರದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ, ಇವರಿಗೆ ವಹಿಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ದಿನಾಂಕ:25.04.2019ರಲ್ಲಿ ನಿರ್ದೇಶಿಸಲಾಗಿರುತ್ತದೆ.

ಓದಲಾದ (3)ರ ಪತ್ರದ ಜೊತೆ ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಬೀದರ್ ಜಿಲ್ಲೆ ಇವರು ವಿಚಾರಣಾವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರಣಾವರದಿಯಲ್ಲಿ ಅಂದರೆ ಈ ಪ್ರಕರಣದಲ್ಲಿ ಹಣಕಾಸಿನ ಅವ್ಯವಹಾರದಲ್ಲಿ ಹಣದುರುಪಯೋಗ ಮಾಡಿರುವ ಸದಸ್ಯರುಗಳ ಹೆಸರುಗಳು ಈ ಕೆಳಕಂಡಂತೆ ಇರುತ್ತವೆ.

**1) ಶ್ರೀಮತಿ ಫರಜಾನ ಬೇಗಂ 2) ಶ್ರೀ ಸಲಿಮೋದ್ದಿನ್ 3) ಶ್ರೀ ನಜೀರ್ ಅಹಮ್ಮದ್**

**4) ಶ್ರೀಮತಿ ದೇವಾ ಬಾಯಿ ಮತ್ತು 5) ಶ್ರೀ ತಜಮೂಲಹುಸೇನ**

ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು 05 ಜನ ಸದಸ್ಯರಿಗೆ ದಿನಾಂಕ: 12.06.2019 ರಂದು ಕಾರಣ ಕೇಳುವ ನೋಟಿಸ್ ಜಾರಿಮಾಡಿದ್ದು, ಸದರಿ ನೋಟೀಸಿಗೆ ಮೇಲ್ಕಂಡ ಎಲ್ಲಾ ಸದಸ್ಯರು ದಿನಾಂಕ: 24.06.2019ರಂದು ಖುದ್ದು ಹಾಜರಾಗಿ ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆಂದು ವಿಚಾರಣಾವರದಿಯಲ್ಲಿ ತಿಳಿಸಿರುತ್ತಾರೆ, ಹಾಗೂ ವಿಚಾರಣಾಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳ ವಾದ ಮತ್ತು ವಿವಾದಗಳನ್ನು ಆಲಿಸಿ ಅವರುಗಳು ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು ವಿಚಾರಣಾವರದಿಯಲ್ಲಿ 05 ಜನ ಸದಸ್ಯರು ತಮ್ಮ ಹೆಸರಿನಲ್ಲಿ ಮತ್ತು

ಸಂಬಂಧಿಕರ ಹೆಸರಿನಲ್ಲಿ ಚೆಕ್‌ಗಳ ಮೂಲಕ ಹಣ ಪಡೆದಿರುವ ಕುರಿತು ಓಚರ್, ಬ್ಯಾಂಕ್ ಪಾಸ್ ಬುಕ್ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಲ್ಲಿ ದಾಖಲಾಗಿರುವ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ.ಸಂ | ಸದಸ್ಯರುಗಳ ಹೆಸರು | ದಾಖಲಾಗಿರುವ ಹಣದ ವಿವರ |
|---|---|---|
| 1 | **ಶ್ರೀಮತಿ ಫರಜಾನ ಬೇಗಂ** | ರೂ. 15,000/-. |
| 2 | **ಶ್ರೀ1 ಸಲಿಮೋದ್ದಿನ್** | ರೂ. 11,000/-. |
| 3 | **ಶ್ರೀ ನಜೀರ್ ಅಹಮ್ಮದ್** | ರೂ. 9,700/-. |
| 4 | **ಶ್ರೀಮತಿ ದೇವಾ ಬಾಯಿ** | ರೂ. 14,000/-. |
| 5 | **ಶ್ರೀ ತಜಮೂಲಹುಸೇನ** | ರೂ. 21,000/-. |

ಮೇಲೆ ತಿಳಿಸಿರುವ ಹಣವನ್ನು ಆರೋಪಿತ ಸದಸ್ಯರುಗಳು ಅವರ ಸಂಬಂಧಿಕರ ಹೆಸರಿನ ಮೇಲೆ ಚೆಕ್ ನೀಡಿರುವುದು ಅವರುಗಳ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿತ್ತಾರೆ, ಆದರೆ, ಇದಕ್ಕೆ ಯಾವುದೇ ಪೂರಕವಾದ ದಾಖಲೆಗಳನ್ನು ಸಲ್ಲಿಸದೇಇರುವುದರಿಂದ ಮೇಲ್ಕಂಡ 05 ಜನ ಪಂಚಾಯಿತಿಯ ಸದಸ್ಯರುಗಳು ಸ್ವಂತ ಹೆಸರಿನಲ್ಲಿ ಮತ್ತು ಸಂಬಂಧಿಕರ ಹೆಸರಿನಲ್ಲಿ ಚೆಕ್ ಮೂಲಕ ಹಣಪಡೆದು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(1)(V) ಮತ್ತು 48(4)ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದಾಗಿ ವಿಚಾರಣಾಧಿಕಾರಿಗಳು ವಿಚಾರಣಾವರದಿಯಲ್ಲಿ ತಿಳಿಸಿತ್ತಾ, ಸದರಿ ಅಧಿನಿಯಮದ ಮೇರೆಗೆ ಇವರುಗಳನ್ನು ಗ್ರಾಮ ಪಂಚಾಯಿತಿಯ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕರಲು ಶಿಫಾರಸ್ಸುಮಾಡಿರುತ್ತಾರೆ ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ 05 ಜನ ಸದಸ್ಯರುಗಳನ್ನು ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಬರುವಂತೆ ಸರ್ಕಾರವು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/686/ಗ್ರಾಪಂಅ/2019**
**ಬೆಂಗಳೂರು, ದಿನಾಂಕ:-24-01-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬೀದರ್ ಜಿಲ್ಲೆ, ಬೀದರ್ ತಾಲ್ಲೂಕಿನ, ಬಗದಲ್ ಗ್ರಾಮ ಪಂಚಾಯಿತಿಯ, 05 ಜನ ಚುನಾಯಿತ ಸದಸ್ಯರಾದ **1) ಶ್ರೀಮತಿ ಫರಜಾನ ಬೇಗಂ 2) ಶ್ರೀ ಸಲಿಮೋದ್ದಿನ್ 3) ಶ್ರೀ ನಜೀರ್ ಅಹಮ್ಮದ್ 4) ಶ್ರೀಮತಿ ದೇವಾ ಬಾಯಿ ಮತ್ತು 5) ಶ್ರೀ ತಜಮೂಲಹುಸೇನ** ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬಿತಾಗಿರುವುದರಿಂದ ಮತ್ತು ಹಣದುರುಪಯೋಗ ಮಾಡಿರುವುದು ರುಜುವಾತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವಾರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(V) ರಡಿಯಲ್ಲಿ ಇವರುಗಳ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 24/1/2020
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ,</u>

24/1/20

1. ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು ಕಲಬುರಗಿ ವಿಭಾಗ, ಕಲಬುರಗಿ.
2. ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ, ಬೀದರ್,

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೀದರ್, ಬೀದರ್ ಜಿಲ್ಲೆ.
5. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಗದಲ್ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಬೀದರ್, ಬೀದರ್ ಜಿಲ್ಲೆ, **(ಪ್ರಕರಣಕ್ಕೆ ಸಂಬಂಧಿಸಿದ ಕೆಳಕಂಡ ಸದಸ್ಯರುಗಳಿಗೆ ಈ ಆದೇಶ ಜಾರಿಮಾಡಿ, ಸ್ವೀಕೃತಿ ಪಡೆದು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ).**
   **1) ಶ್ರೀಮತಿ ಫರಜಾನ ಬೇಗಂ 2) ಶ್ರೀ ಸಲಿಮೋದ್ದಿನ್ 3) ಶ್ರೀ ನಜೀರ್ ಅಹಮ್ಮದ್ 4) ಶ್ರೀಮತಿ ದೇವಾ ಬಾಯಿ ಮತ್ತು 5) ಶ್ರೀ ತಜಮೂಲಹುಸೇನ** ಬಗದಲ್ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಬೀದರ್, ಬೀದರ್ ಜಿಲ್ಲೆ.
6. ಶಾಖಾ ರಕ್ಷಾ ಕಡತ/ಗಣಕಕೋಶ/ಹೆಚ್ಚುವರಿ/ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌದ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.